ವಿಚಾರವಾಗಿ ಸದನದಲ್ಲಿ ಬಿಲ್ ಪಾಸ್ ಮಾಡಿದ್ದೇವೆಂದು ಹೇಳಿದರು. ಅದು ನನಗೆ ಗೊತ್ತಿರುವ ಹಾಗೆ ಅದನ್ನು ಕಬ್ಬನ್ ಪಾರ್ಕ್‌ಗೆ ಮಾತ್ರ ಮಾಡಿರುವಂಥಾದ್ದು; ತಾವು ಬೇಕಾದರೆ ಅದನ್ನು ತರಿಸಿ ನೋಡಿ.

ಶ್ರೀ ವಾಟಾಳ್ ನಾಗರಾಜ್ : ಅದರಲ್ಲಿ ಲಾಲ್‌ಬಾಗ್ ಇಲ್ಲ, ಕಬ್ಬನ್ ಪಾರ್ಕ್ ಎಂದು ಇದೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ವಾಟಾಳ್ ನಾಗರಾಜ್‌ರವರು ಕೇಳಿದಂತಹ ಪ್ರಶ್ನೆಗೆ ನಿಮ್ಮಿಂದ ಮಂಥ್ಲಿ ಪಾಸ್ ಏನಾದರೂ ಕೊಡುತ್ತೀರಾ?

ಶ್ರೀ ಎಂ. ಸಿ. ನಾಣಯ್ಯ : ಮಂಥ್ಲೀ ಪಾಸ್ ಯಾರಿಗೆ?

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ವಾಟಾಳ್ ನಾಗರಾಜ್‌ರವರು ದಿನವೂ 3-4 ಲೀಟರ್ ನೀರು ಕುಡಿಯುತ್ತೇವೆಂದು ಹೇಳಿದರು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಒಂದು ಪ್ರಶ್ನೆಯನ್ನು ಕೇಳಿದರು, ನಿಜ, ಮನುಷ್ಯರಿಗೆ ಕೆಲವು ದೈಹಿಕವಾಗಿ ಡಯಾಬಿಟಿಸ್ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನನಗೆ ಅಂತಹ ಅನಾರೋಗ್ಯ ಯಾವುದೂ ಇಲ್ಲ. ನಾವು ಆರೋಗ್ಯವಾಗಿರಬೇಕೆಂದರೆ ಪ್ರತಿದಿವಸ ಬೆಳಿಗ್ಗೆ ಕನಿಷ್ಟ ಮೂರು ಲೀಟರ್ ನೀರು ಕುಡಿಯಬೇಕು, ಬೀಯರ್ ಅಲ್ಲ. ರಾತ್ರಿ ಹೊತ್ತು ಬೀಯರ್ ಕುಡಿಯಬೇಕು, ಬೆಳಿಗ್ಗೆ ನೀರು ಕುಡಿಯಬೇಕು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ಬೀಯರ್ ಆದರೂ ಕುಡಿಯಲಿ, ನೀರಾದರೂ ಕುಡಿಯಲಿ, ಬೆಳಿಗ್ಗೆ ವಾಯು ಸೇವನೆಗೆ ಹೋಗುವಂತಹ ಸಂದರ್ಭದಲ್ಲಿ ಒಂದು-ಒಂದೂವರೆ ಗಂಟೆಗಳ ಕಾಲ ಅವರು ಪಾರ್ಕ್‌ನಲ್ಲಿ ತಿರುಗಾಡುತ್ತಾರೆ. ಆ ಅವಧಿಯಲ್ಲಿ ದೈಹಿಕವಾಗಿರುವಂತಹ ಈ ವಿಚಾರವನ್ನು ನಿಯಂತ್ರಣ ಮಾಡಿಕೊಳ್ಳುವುದ್ಕಕಾಗದೇ ಇರುವವರು ಪಾರ್ಕಿಗೆ ಹೋಗುವಾಗ ಒಂದೊಂದು ಪಾಲಿಥಿನ್ ಬ್ಯಾಗ್‌ಗಳನ್ನು ಕೈಯಲ್ಲಿ ತೆಗೆದುಕೊಂಡು ಹೋಗಲಿ.

ಶ್ರೀ ವಾಟಾಳ್ ನಾಗರಾಜ್ : ನೀವು ಅದನ್ನಾದರೂ ಒದಗಿಸುತೀರೋ?

ಗುಳ್ಳೇದಗುಡ್ಡ ಬಸ್ ನಿಲ್ದಾಣದಲ್ಲಿ ಡಾಂಬರೀಕರಣ

180 - ಶ್ರೀ ರಾಜಶೇಖರ ವಿ. ಶೀಲವಂತ (ಗುಳ್ಳೇದಗುಡ್ಡ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿನ ಯಾವ ಯಾವ ಬಸ್ ನಿಲ್ದಾಣದ ಆವರಣವನ್ನು ಡಾಂಬರೀಕರಣಗೊಳಿಸಲಾಗಿದೆ?

ಆ) ಗುಳೇದಗುಡ್ಡ ಬಸ್ ನಿಲ್ದಾಣದ ಆವರಣವನ್ನು ಡಾಂಬರೀಕರಣಗೊಳಿಸಬೇಕೆಂದು ಸಾರ್ವಜನಿಕರ ಒತ್ತಾಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಡಾಂಬರೀಕರಣವನ್ನು ಯಾವಾಗ ಮಾಡಲಾಗುವುದು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) 1997-98ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿನ ಬಿಜಾಪುರ, ಬನಹಟ್ಟಿ, ಮುಧೋಳ ರಭಕವಿ, ಟಿಕೋಟ ಮತ್ತು ಬಬಲೇಶ್ವರ ಬಸ್ ನಿಲ್ದಾಣಗಳ ಆವರಣಗಳನ್ನು ಡಾಂಬರೀಕರಣಗೊಳಿಸಲು ಅಂದಾಜು ಪಟ್ಟಿಗಳಿಗೆ ಮಂಜೂರಾತಿ ನೀಡಲಾಗಿದೆ. ಬಿಜಾಪುರ ಬನಹಟ್ಟಿ ಮತ್ತು ಮುಧೋಳ ಬಸ್ ನಿಲ್ದಾಣಗಳ ಆವರಣಗಳಿಗೆ ಡಾಂಬರೀಕರಣ ಮಾಡುವ ಕೆಲಸವು ಪೂರ್ಣಗೊಂಡಿರುತ್ತದೆ. ರಭಕವಿ ಬಸ್ ನಿಲ್ದಾಣದ ಆವರಣಕ್ಕೆ ಡಾಂಬರೀಕರಣ ಮಾಡುವ ಕೆಲಸವು ಪ್ರಗತಿಯಲ್ಲಿರುತ್ತದೆ. ಟಿಕೋಟ ಮತ್ತು ಬಬಲೇಶ್ವರ ಬಸ್ ನಿಲ್ದಾಣಗಳ ಆವರಣಗಳಿಗೆ ಡಾಂಬರೀಕರಣ ಮಾಡಲು ಗುತ್ತಿಗೆದಾರರುಗಳಿಂದ ಟೆಂಡರ್‌ಗಳನ್ನು ಸ್ವೀಕರಿಸಲಾಗಿ ಟೆಂಡರ್‌ಗೆ ಒಪ್ಪಿಗೆ ನೀಡಿದ ನಂತರ ಈ ಕೆಲಸಗಳನ್ನು ಕೈಗೊಳ್ಳಲಾಗುವುದು.

ಆ) ಬಂದಿದೆ.

ಇ) ಈ ಕೆಲಸವನ್ನು 1998-9ನೇ ಸಾಲಿನಲ್ಲಿ ಕೈಗೊಳ್ಳಲಾಗುವುದು.

ಶ್ರೀ ರಾಜಶೇಖರ ವಿ. ಶೀಲವಂತ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಉತ್ತರವನ್ನು ಒದಗಿಸಿದ್ದಾರೆ. ಬಿಜಾಪುರ ಜಿಲ್ಲೆಯ ಟಕೋಟ ಮತ್ತು ಓಬಲೇಶ್ವರ ಮತ್ತು ಮತ್ತಿತರ ಪ್ರಮುಖವಾದಂತಹ ಬಸ್ ನಿಲ್ದಾಣಗಳಲ್ಲಿ ಡಾಂಬರೀಕರಣ ಕೆಲಸ ನಡೆದಿದೆ. 1998-99ನೇ ಗುಳೇದಗುಡ್ಡ ಬಸ್ಸು ನಿಲ್ದಾಣದ ಆವರಣದಲ್ಲೂ ಡಾಂಬರೀಕರಣ ಮಾಡುತ್ತೇವೆನ್ನುವಂತಹ ಉತ್ತರವನ್ನು ಒದಗಿಸಿದ್ದಾರೆ. ತಾವು ಉತ್ತರ ಹೇಳಿದಷ್ಟಕ್ಕೆ ನಿಲ್ಲಬಾರದು, ಅದು ಪ್ರತ್ಯಕ್ಷವಾಗಿ ನಡೆಯುವಂಥಾಗಬೇಕೆಂದು ನಾನು ಒತ್ತಾಯ ಮಾಡುತ್ತೇವೆ.

ಶ್ರೀ ಎಂ. ಸಿ. ನಾಣಯ್ಯ (ಸಾರಿಗೆ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, 1997-98ನೇ ಸಾಲಿಗೆ ಗುಳೇದಗುಡ್ಡದ ಬಸ್ ಆವರಣದಲ್ಲಿ ಡಾಂಬರೀಕರಣ ಮಾಡುವಂತಹ ಕಾರ್ಯಕ್ರಮವನ್ನು ಈಗಾಗಲೇ ಹಮ್ಮಿಕೊಂಡಿದ್ದೇವೆ. 1998-99ರ ಬಜೆಟ್‌ನಲ್ಲಿ ನೂರು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಈ ಕೆಲಸವನ್ನು ಡಿಸೆಂಬರ್ ಒಳಗಡೆ ಕಾರ್ಯಕ್ರಮವನ್ನು ಮಾಡಿ ಮುಗಿಸಿಕೊಡುತ್ತೇವೆ.

ಹಾಫ್‌ಕಾಮ್ಸ್ ನೌಕರರನ್ನು ಖಾಯಂಗೊಳಿಸುವುದು

181 - ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಹಾಫ್‌ಕಾಮ್ಸ್ ನೌಕರರನ್ನು ಖಾಯಂ ಮಾಡಲಾಗಿದೆ?

ಆ) ಖಾಯಂ ಮಾಡುವಾಗ ಅನುಸರಿಸಿರುವ ನೀತಿ ನಿಯಮಗಳೇನು?

ಇ) ಇನ್ನು ಉಳಿದಿರುವ ನೌಕರರನ್ನು ಯಾವಾಗ ಖಾಯಂ ಮಾಡಲಾಗುವುದು (ವಿವರ ನೀಡುವುದು)